(೧) ಹೆಂಚಿನ ಉದ್ಯಮಕ್ಕೆ ರಾಜ್ಯ ಸರ್ಕಾರದ ನೆರವಿನ ಬಗ್ಗೆ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯ ಸರಕಾರಗಳು ಹೊಸ ಹೆಂಚಿನ ಉದ್ದಿಮೆಗಳಿಗೆ ವಿಶೇಷ ರಿಯಾಯಿತಿ, ಸಹಾಯ ಧನ ತೆರಿಗೆ ವಿನಾಯಿತಿ ಕಡಿಮೆ ವೆಚ್ಚದ ಇಂದನ ಪೂರೈಕೆ ಮಾಡಿದ ಕಾರಣದಿಂದಾಗಿ, ಆ ರಾಜ್ಯಗಳಲ್ಲಿ ತೀರ ಕಡಿಮೆ ಬೆಲೆಯಲ್ಲಿ ಹೆಚ್ಚು ಉತ್ಪಾದನೆ ಆಗುತ್ತಿದೆ. ಆದರಿಂದಾಗಿ ಈ ತನಕ ಮಾರಲ್ಪಡುತ್ತಿದ್ದ ಕರ್ನಾಟಕದ ಹೆಂಚಿಗೆ ಆ ರಾಜ್ಯಗಳಲ್ಲಿ ಬೇಡಿಕೆ ಇಲ್ಲವಾಗುತ್ತ ಬಂದಿದೆ, ಕಾರಣ, ಕರ್ನಾಟಕದ ಹೆಂಚಿನ ಉತ್ಪಾದನಾ ಬೆಲೆ ಅಧಿಕ, ಸಾಗಾಟ ವೆಚ್ಚವೂ ಜಾಸ್ತಿ. ಈ ಸಂದರ್ಭದಲ್ಲಿ ರಾಜ್ಯ ಸರಕಾರ ಹೆಂಚಿನ ಉದ್ದಿಮೆಗೆ ನೆರವು ನೀಡದಿದ್ದರೆ ಉದ್ದಿಮೆ ಮುಚ್ಚುವ ಹಂತಕ್ಕೆ ಬರುತ್ತದೆ. ಪರಿಣಾಮ ಲಕ್ಷಾಂತರ ಮಂದಿ ಕಾರ್ಮಿಕರು, ಸಾಗಾಟಗಾರರು ನಿರ್ಮಾಣ ಕೆಲಸಗಾರರು ಉದ್ಯೋಗ ರಹಿತರಾಗುವ ಸನ್ನಿವೇಶ ಬರುತ್ತದೆ. ಉತ್ಪಾದನಾ ವೆಚ್ಚ ಕಡಿತಗೊಳಿಸಲು ಸರಕಾರ ಕಡಿಮೆ ಬೆಲೆಯಲ್ಲಿ ಹೆಂಚಿನ ಉದ್ದಿಮೆಗೆ ಕಟ್ಟಿಗೆ ಒದಗಿಸಬೇಕು. ಉತ್ತರ ಕನ್ನಡದ ಕಿರುವತ್ತಿ, ಮುಂಡುಗೋಡು ಡಿಪೋಗಳಿಂದ ಅರಣ್ಯ ಇಲಾಖೆ ಕ್ಯೂಬಿಕ್ ಮೀಟರಿಗೆ ರೂಪಾಯಿ ನೂರಕ್ಕೂ ಕಡಿಮೆ ದರದಲ್ಲಿ ಮೈಸೂರು ಪೇಪರ್ ಮಿಲ್ಸ್‌ಗೆ ನೀಡುತ್ತಿದೆ. ಹೆಂಚಿನ ಉದ್ದಿಮೆದಾರರು ಕಟ್ಟಿಗೆ ಬೇಕಾದಲ್ಲಿ ಹೆಚ್ಚಿಗೆ ದರದಲ್ಲಿ ಹರಾಜಿಗೆ ನಿಲ್ಲಬೇಕಾಗಿದೆ. ಸರಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ದೊರೆಯುವ ರಿಯಾಯಿತಿ ಜನತೆಯ ಪಾಲುದಾರಿಕೆಯ ಕಾರ್ಮಿಕ ಪ್ರಧಾನವಾದ ಹಾಗೂ ಕೈಮಡೆ ಸಹಕಾರಿ ರಂಗದ ಮೂಲಕ ಜರುಗುವ ಹೆಂಚಿನ ಉದ್ದಿಮೆಗೂ ದೊರಕಬೇಕು, ಎಂ.ಪಿ.ಎಂ.ಗೆ ನೀಡಿದಂತೆ ಕಡಿಮೆ ಬೆಲೆಯಲ್ಲಿ ಕಟ್ಟಿಗೆ ಒದಗಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನಾನು ಉತ್ತರವನ್ನು ತರಿಸಿ ಕೊಡುತ್ತೇನೆ

(೨) ಜಮಖಂಡಿ ತಾಲ್ಲೂಕಿನ ಆಲಬಾಳ ಗ್ರಾಮದಲ್ಲಿ ಹರಿಜನರ ೩೩ ಗುಡಿಸಲುಗಳು ಭಸ್ಮವಾಗಿದ್ದು ಪರಿಹಾರಕ್ಕೆ ಒತ್ತಾಯ

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನ ಆಲಬಾಳ ಗ್ರಾಮದಲ್ಲಿ ದಿನಾಂಕ ೫-೪-೧೯೮೮ ರಂದು ಭಯಂಕರ ಅಗ್ನಿಪ್ರಕೋಪ ಉಂಟಾಗಿ ಅಲ್ಲಿಯ ಬಡ ಜನರಿಗೆ ಸೇರಿದ ಸುಮಾರು ೩೩ ಗುಡಿಸಲುಗಳು ಸುಟ್ಟು ಹೋಗಿವೆ. ಬೆಂಕಿ ಕಾಣಿಸಿಕೊಂಡು ಕೂಡಲೇ ಗ್ರಾಮಸ್ಥರು ಮತ್ತು ಜಮಖಂಡಿಯಿಂದ ಬಂದು ಅಗ್ನಿಶಾಮಕದವರು ಕೂಡಿಕೊಂಡು ಬೆಂಕಿಯನ್ನು ನಂದಿಸಲು ಪ್ರಯತ್ನಗಳನ್ನು ಮಾಡಿದರೂ ೩೩ ಗುಡಿಸಲುಗಳು ಸುಟ್ಟು ಭಸ್ಮವಾಗಿದೆ. ಸುದೈವದಿಂದ ಯಾರಿಗೂ ಪ್ರಾಣಹಾನಿಯಾಗಿಲ್ಲ. ಎಲ್ಲಾ ಗುಡಿಸಲುಗಳಲ್ಲಿದ್ದ ಪಾತ್ರೆ ಪಡಗ, ಆಹಾರ ಧಾನ್ಯ, ಬಟ್ಟೆ ಬರೆಗಳು ಸಂಪೂರ್ಣ ಸುಟ್ಟು ಹೋಗಿದ್ದು ಅನೇಕ ಜಾನುವೆಗಳು ಸುಟ್ಟು ಹೋಗಿವೆ. ಆಗಿರುವ ಹಾನಿಯ ಒಟ್ಟು ಅಂದಾಜು ಎರಡೂವರೆ ಲಕ್ಷಗಳಿಗೆ ಮಿಕ್ಕಿರುತ್ತವೆ. ಸುದ್ದಿ ತಿಳಿದ ನಂತರ ಕಂದಾಯ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಬಂದು ನಿಯಮಗಳ ಪ್ರಕಾರ ಪಂಚನಾಮೆ ಮಾಡಿಕೊಂಡು ಹೋಗಿದ್ದಾರೆ. ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರೂ ಸಹ ಸ್ಥಳಕ್ಕೆ ಬೇಟಿ ನೀಡಿ ದುರಂತವನ್ನು ಕಣ್ಣಾರೆ ಕಂಡಿದ್ದಾರೆ. ಹರಿಜನರು ಬೀದಿ ಪಾಲಾಗಿದ್ದಾರೆ. ಜಿಲ್ಲೆಯ ಉಸ್ತುವಾರಿ ಸಚಿವರು ಹರಿಜನ ಕೋಮಿಗೆ ಸೇರಿದ ಮಂತ್ರಿಗಳು ಆಗಿ ಅಲ್ಲಿಗೆ ಭೇಟಿ ಕೊಡುವ ಸೌಜನ್ಯವನ್ನು ತೋರಿಸಿಲ್ಲ. ಸಂಪೂರ್ಣವಾಗಿ ನಿರಾಧಾರಿಗಳಾದ ಈ ಹರಿಜನರೆಲ್ಲಾ ಅಂದಿನಿಂದ ಇಂದಿನವರೆಗೆ ಸ್ಥಳೀಯ ಶಾಲೆಯ ಆವರಣದಲ್ಲೇ ಠಾಣೆ ಹೂಡಿದ್ದಾರೆ. ಪರಿಹಾರ ಧನ ಹಾಗೂ ಆಶ್ರಯವಿಲ್ಲದೆ ಆಲಬಾಳ ನರಿಗೆ ಈ ಕೂಡಲೇ ಎಲ್ಲಾ ತರಹದ ಪರಿಹಾರ ಧನವನ್ನು ಒದಗಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.